ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
ಶ್ರೀರಂಗಪಟ್ಟಣ
ಸಿಸಿ 4/2019 ಸಿಡಬ್ಲ್ಯೂ : 3 ಪಿ ಡಬ್ಲ್ಯೂ : 3

| | |
|---|---|
| ಹೆಸರು | ಸತ್ಯರಾಜ್ ಕೆ ಕೆ |
| ತಂದೆಯ ಹೆಸರು | ಡಿ ಕೆಂಚೇಗೌಡ |
| ವಯಸ್ಸು | 40 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಕೋಡಿಶೆಟ್ಟಿಪುರ ಗ್ರಾಮ |

ದಿನಾಂಕಃ 10.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ</u>

1. ಈ ಕೇಸಿನಲ್ಲಿ ವೆಂಕಟೇಶ್ ಎಂಬುವವರು ಮೃತ ಪಟ್ಟಿದ್ದು, ಆತ ಅಪಘಾತದಲ್ಲಿ ಮೃತ ಪಟ್ಟಿರುವುದಾಗಿ ಪೊಲೀಸರು ತಿಳಿಸಿರುತ್ತಾರೆ. ಸಾಕ್ಷಿ ನಿಪಿ 4 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಗಿದೆ. ಸುಮಾರು 4 ವರ್ಷದ ಹಿಂದೆ ನಾನು ನಮ್ಮ ಊರಿನ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಪೊಲೀಸರು ಬಂದು ನಮ್ಮ ಊರಿನ ವೆಂಕಟೇಶ್ ಗೆ ಅಪಘಾತವಾಗಿ ಆತ ಮರಣ ಹೊಂದಿರುವುದಾಗಿ ತಿಳಿಸಿ ಆ ಬಗ್ಗೆ ನಿಪಿ 4 ರಂತೆ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿರುವುದಾಗಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ 4 ಅನ್ನು ನಾನು ಸಹಿ ಮಾಡಿದಾಗ ನನ್ನ ತೋಟದಲ್ಲಿ ನನ್ನನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ, ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ. ಆರೋಪಿಯ ಪರಿಚಯವಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು : ಎ ಪಿ ಪಿ ರವರಿಂದಃ

2. ದಿಃ 24.01.2018 ರಂದು ನನ್ನನ್ನು ಹಾಗೂ ಚಾಸಾ 7 ರವರನ್ನು ಪೊಲೀಸರು ಪಂಚನಾಮೆಗೆ ಬರಲು ಕೋರಿದ್ದು, ನಾವುಗಳು ಒಪ್ಪಿ ಅಪಘಾತವಾದ ಸ್ಥಳಕ್ಕೆ ಹೋದಾಗ ಚಾಸಾ 2 ರವರು ಅಪಘಾತದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳದಲ್ಲಿ ಪೊಲೀಸರು ನಿಪಿ 4 ರಂತೆ ಪಂಚನಾಮೆಯನ್ನು ಮಾಡಿದ್ದು, ಅದರಲ್ಲಿ ಸ್ಥಳದ ವಿದ್ಯಮಾನಗಳನ್ನು ಬರೆದಿದ್ದು, ನನ್ನ ಹಾಗೂ ಚಾಸಾ 2 ಮತ್ತು 7 ರವರ ಸಮಕ್ಷಮ ಕಚ್ಚಾ ನಕಾಶೆಯನ್ನು ತಯಾರಿಸಿ ನಂತರ ನಿಪಿ 4 ಅನ್ನು ನಮಗೆ ಓದಿ ಹೇಳಿ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೆ 4 ರಿಂದ 4.45 ಗಂಟೆಯ ವರೆಗೂ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ದುರುದ್ದೇಶದಿಂದ ನಿಪಿ 4 ರಂತೆ ನನ್ನ ಹಾಗೂ ಚಾಸಾ 2 ಮತ್ತು 7 ರವರ ಸಮಕ್ಷಮ ಪಂಚನಾಮೆಯನ್ನು ಅಪಘಾತ ಸ್ಥಳದಲ್ಲಿ ಮಾಡಿ, ಓದಿ ಹೇಳಿ ನಮ್ಮಗಳ ಸಹಿಗಳನ್ನು ಪಡೆದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. .

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.

-